# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1695
ಸದಸ್ಯರ ಹೆಸರು : ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 18.03.2026
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿರಾ ತಾಲ್ಲೂಕಿನ ಚಿಕ್ಕಚೆನ್ನಯ್ಯ ಮತ್ತು ಹಾಗೂ ರಾಮದಸ್ ತಹಶೀಲ್ದಾರ್‌ಗಳ ಕಾಲದಲ್ಲಿ ನೀಡಲಾದ ಸಾಗುವಳಿ ಜಮೀನುಗಳ ತನಿಖೆಗಾಗಿ ತಂಡ ರಚಿಸಲಾಗಿದೆಯೇ; ರಚಿಸಲಾಗಿದ್ದರೆ ಸದರಿ ಆದೇಶವನ್ನು ನೀಡುವುದು; | ಸರ್ಕಾರದ ಆದೇಶ ಸಂಖ್ಯೆ ಕಂ ಇ 88 ಎಲ್ ಜಿ ಟಿ 2024, ಬೆಂಗಳೂರು ದಿನಾಂಕ:06.11.2024 ಮತ್ತು 19.11.2024 ರ ಆದೇಶದಂತೆ ಅಪರ ಪ್ರಾದೇಶಿಕ ಆಯುಕ್ತರು (ಪ್ರ), (ಭೂ ನಿರ್ವಹಣೆ ಯೋಜನೆ ಮತ್ತು ಇತರೆ) ಬೆಂಗಳೂರು ವಿಭಾಗ ಇವರ ಅಧ್ಯಕ್ಷತೆಯಲ್ಲಿ ತನಿಖಾ ತಂಡವನ್ನು ರಚಿಸಲಾಗಿರುತ್ತದೆ. ಆದೇಶದ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ಚಿಕ್ಕಚೆನ್ನಯ್ಯ ಮತ್ತು ರಾಮದಾಸ್ ಅವಧಿಯಲ್ಲಿ ನೀಡಲಾದ ಸಾಗುವಳಿ ಚೀಟಿಗಳ ಸಂಖ್ಯೆ ಎಷ್ಟು; (ಗ್ರಾಮಾವಾರು ವಿವರ ನೀಡುವುದು) | ಸರ್ಕಾರದ ಆದೇಶದಂತೆ ತನಿಖಾ ತಂಡವು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ನಡೆಸಿ ವರದಿಯನ್ನು ದಿನಾಂಕ:12.03.2026 ರಂದು ಸಲ್ಲಿಸಿದ್ದು, ಸದರಿ ತನಿಖಾ ವರದಿಯು ಪರಿಶೀಲನಾ ಹಂತದಲ್ಲಿರುತ್ತದೆ. |
| ಇ) | ಸಾಗುವಳಿ ಚೀಟಿಯ ನೈಜತೆಯನ್ನು ಪರಿಶೀಲಿಸುವ ಬಗ್ಗೆ, ಹೇಗೆ, ಯಾವ ಆಧಾರದ ಮೇಲೆ ನಕಲಿ-ಅಸಲಿ ಸಾಗುವಳಿ ಚೀಟಿ ಎಂದು ತೀರ್ಮಾನಿಸಲಾಗುವುದು; ಶಿರಾ ತಾಲ್ಲೂಕಿನ ಸಾಗುವಳಿ ಚೀಟಿಯ ನೈಜತೆಯ ಪರಿಶೀಲನೆಯನ್ನು ಸ್ಥಳೀಯ ಕಂದಾಯ ಇಲಾಖೆಯ ಅಧಿಕಾರಿಗಳೇ ಮಾಡಲು ಅವಕಾಶವಿರಲಿಲ್ಲವೇ; ಇಲ್ಲದೆ ಇದ್ದರೆ ಇದಕ್ಕೆ ಕಾರಣಗಳೇನು; | ಪ್ರಸ್ತಾಪಿತ ಜಮೀನುಗಳ ಮಂಜೂರಾತಿ ನೈಜತೆ ಕುರಿತು ಪರಿಶೀಲಿಸುವ ಸಲುವಾಗಿ ಸರ್ಕಾರವು ತನಿಖಾ ತಂಡವನ್ನು ರಚಿಸಲಾಗಿರುತ್ತದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಭೂ ಮಂಜೂರಾತಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಲ್ಲಿ ನಿರ್ವಹಿಸಬೇಕಾದ ದಾಖಲೆಗಳು ಯಾವುವು; ಕಂದಾಯ ಇಲಾಖೆಯ ಅಧಿಕಾರಿಗಳು ಸಮರ್ಪಕವಾಗಿ ದಾಖಲೆ ನಿರ್ವಹಿಸದೆ ಇದ್ದಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದಂತೆ ಆಗುವುದಿಲ್ಲವೇ; ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು; | ಭೂ ಮಂಜೂರಾತಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಲ್ಲಿ ಈ ಕೆಳಕಂಡ ದಾಖಲೆಗಳನ್ನು ನಿರ್ವಹಿಸಲಾಗಿರುತ್ತದೆ. ಮಂಜೂರಾತಿ ಕಡತ ,ಅರ್ಜಿ, ಸಾಗುವಳಿ ಚೀಟಿ ವಿತರಣಾ ವಹಿ, ಅಧಿಕೃತ ಜ್ಞಾಪನ, ಮ್ಯುಟೇಷನ್ ಮತ್ತು ಪಹಣಿ, ಅಹವಾಲು ತಖ್ತೆ, ಶುಲ್ಕ ಪಾವತಿಸಿದ ಕುರಿತು ದಾಖಲೆ , ದರಖಾಸ್ತು ಮೆ ಮೋರಾಂಡಂ, ಕರ್ದ, ಇತರ ಅಗತ್ಯ ದಾಖಲೆಗಳು. |
| ಉ) | ಸಾಗುವಳಿ ಚೀಟಿಯ ನೈಜತೆಯನ್ನು ಪರಿಶೀಲಿಸಲು ಸರ್ಕಾರವು ತಂಡ ರಚಿಸಿ ಎಷ್ಟು ತಿಂಗಳುಗಳು ಕಳೆದಿವೆ; ಇಲ್ಲಿಯವರೆಗೆ ಸದರಿ ತಂಡ ಎಷ್ಟು ಸಾಗುವಳಿ ಚೀಟಿಗಳನ್ನು ಪರಿಶೀಲನೆ ಮಾಡಿದೆ; ಮಾಡಿದ ಸಭೆಗಳು ಎಷ್ಟು; (ಸಂಪೂರ್ಣ ವಿವರ ನೀಡುವುದು) ಸದರಿ ತಂಡವು ತುರ್ತಾಗಿ ವರದಿ ನೀಡಲು ಸರ್ಕಾರ ಕೈಗೊಳ್ಳುವ ಕ್ರಮವೇನು; | ಸರ್ಕಾರದ ಆದೇಶ ಸಂಖ್ಯೆ ಕಂ ಇ 88 ಎಲ್ ಜಿ.ಟಿ 2024, ಬೆಂಗಳೂರು ದಿನಾಂಕ:06.11.2024 ಮತ್ತು 19.11.2024 ರ ಆದೇಶದಂತೆ ಅಪರ ಪ್ರಾದೇಶಿಕ ಆಯುಕ್ತರು (ಪ್ರ), (ಭೂ ನಿರ್ವಹಣೆ ಯೋಜನೆ ಮತ್ತು ಇತರೆ) ಬೆಂಗಳೂರು ವಿಭಾಗ ಇವರ ಅಧ್ಯಕ್ಷತೆಯಲ್ಲಿ ತನಿಖಾ ತಂಡವನ್ನು ರಚಿಸಲಾಗಿರುತ್ತದೆ. ಸರ್ಕಾರದ ಆದೇಶದಂತೆ ತನಿಖಾ ತಂಡವು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ನಡೆಸಿ ವರದಿಯನ್ನು ಕಂದಾಯ ಆಯುಕ್ತರಿಗೆ ದಿನಾಂಕ:12.03.2026 ರಂದು ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯು ಪರಿಶೀಲನಾ ಹಂತದಲ್ಲಿರುತ್ತದೆ. |
| ಊ) | ಅಧಿಕಾರಿಗಳು ಭೂ ಮಂಜೂರಾತಿಯ ದಾಖಲೆಗಳನ್ನು ಮಾತ್ರವೇ ಪರಿಶೀಲನೆ ಮಾಡದೆ ಸ್ಥಳ ಪರಿಶೀಲನೆ ಮಾಡಿ ನಂತರ ನೈಜ ರೈತರಿಗೆ ಯಾವುದೇ ರೀತಿಯಲ್ಲೂ ಅನ್ಯಾಯವಾಗದಂತೆ ಮಾಡಲು ಕ್ರಮ ಕೈಗೊಳ್ಳಲಾಗುವುವೇ? | |

ಸಂಖ್ಯೆ: ಆರ್‌ಡಿ 35 ಎಲ್‌ಜಿಟಿ 2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಅನುಬಂಧ.

ಸಂಖ್ಯೆ:ಆರ್ ಡಿ 88 ಎಲ್‌ಜಿಟಿ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:**19.11.2024**

## ತಿದ್ದುಪಡಿ

ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿಗೆ ಸಂಬಂಧಿಸಿದಂತೆ 1977-78ನೇ ಸಾಲಿನಲ್ಲಿ ದರಖಾಸ್ತು ಮೂಲಕ ಮಂಜೂರಾತಿ ಆಗಿರುವ ಸರ್ಕಾರಿ ಜಮೀನಿನ ಕಡತಗಳ ಪರಿಶೀಲನೆಗೆ ತನಿಖಾ ತಂಡವನ್ನು ರಚಿಸಿರುವ ಸರ್ಕಾರದ ಆದೇಶ ಸಂಖ್ಯೆ:ಕಂಇ 88 ಎಲ್‌ಜಿಟಿ 2024, ದಿನಾಂಕ:06.11.2024ರ ಆದೇಶ ಭಾಗದ ಕ್ರಮ ಸಂಖ್ಯೆ:3 ರಲ್ಲಿನ **ಶ್ರೀ ಇಸ್ಮಾಉದ್ದೀನ್ ಜೆ.ಗದ್ಯಾಳ, ಕೆ.ಎ.ಎಸ್., ಅಪರ ಪ್ರಾದೇಶಿಕ ಆಯುಕ್ತರು (ಪ್ರ) (ಭೂ ನಿರ್ವಹಣೆ, ಯೋಜನೆ ಮತ್ತು ಇತರೆ), ಬೆಂಗಳೂರು ವಿಭಾಗ, ಬೆಂಗಳೂರು ಇವರನ್ನು ಅಧ್ಯಕ್ಷರು** ಎಂದು ಹಾಗೂ ಕ್ರಮ ಸಂಖ್ಯೆ (1) ರಲ್ಲಿನ ಶ್ರೀ ಆರ್.ಜಿ.ಚಂದ್ರಶೇಖರ್, ವಿಶೇಷ ಜಿಲ್ಲಾಧಿಕಾರಿ (ಪ್ರ), ಕೇಂದ್ರೀಯ ಜಾರಿದಳ, ಭೂಮಿ ಉಸ್ತುವಾರಿ ಕೋಶ, ಕಂದಾಯ ಆಯುಕ್ತಾಲಯ, ಬೆಂಗಳೂರು ಇವರನ್ನು ಸದಸ್ಯರು ಎಂದು ತಿದ್ದಿ ಓದಿಕೊಳ್ಳತಕ್ಕದ್ದು, ಉಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

19/11/24
**(ಜಗದೀಶ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-3)

**ಇವರಿಗೆ:**

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
2. ಕಂದಾಯ ಆಯುಕ್ತರು, ಕಂದಾಯ ಆಯುಕ್ತಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
4. ಶ್ರೀ ಆರ್.ಜಿ. ಚಂದ್ರಶೇಖರ್, ವಿಶೇಷ ಜಿಲ್ಲಾಧಿಕಾರಿ (ಪ್ರ), ಕೇಂದ್ರೀಯ ಜಾರಿದಳ, ಭೂಮಿ ಉಸ್ತುವಾರಿ ಕೋಶ, ಕಂದಾಯ ಆಯುಕ್ತಾಲಯ, ಬೆಂಗಳೂರು.
5. ಶ್ರೀಮತಿ ಸೀಮಾ ನಾಯಕ್. ಬಿ., ಕೆ.ಎ.ಎಸ್.,ಅಪರ ಪ್ರಾದೇಶಿಕ ಆಯುಕ್ತರು (ಆಡಳಿತ ಮತ್ತು ಅಭಿವೃದ್ಧಿ), ಬೆಂಗಳೂರು ವಿಭಾಗ, ಬೆಂಗಳೂರು.
6. ಶ್ರೀ ಇಸ್ಮಾಉದ್ದೀನ್ ಜೆ. ಗದ್ಯಾಳ, ಕೆ.ಎ.ಎಸ್.,ಅಪರ ಪ್ರಾದೇಶಿಕ ಆಯುಕ್ತರು (ಪ್ರ) (ಭೂ ನಿರ್ವಹಣೆ, ಯೋಜನೆ ಮತ್ತು ಇತರೆ), ಬೆಂಗಳೂರು ವಿಭಾಗ, ಬೆಂಗಳೂರು.
7. ಶ್ರೀ ಡಾ.ಎನ್.ತಿಪ್ಪೇಸ್ವಾಮಿ, ಕೆ.ಎ.ಎಸ್., ಅಪರ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
8. ಶ್ರೀ ಶಿವಪ್ಪ ಗೊಟೂರು, ಕೆ.ಎ.ಎಸ್., ಉಪ ವಿಭಾಗಾಧಿಕಾರಿ, ಮಧುಗಿರಿ ಉಪ ವಿಭಾಗ, ಮಧುಗಿರಿ.
9. ಶ್ರೀ ಗಣಪತಿ ಶಾಸ್ತ್ರಿ, ತಹಶೀಲ್ದಾರ್,ಕೇಂದ್ರೀಯ ಜಾರಿದಳ, ಕಂದಾಯ ಆಯುಕ್ತಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಶ್ರೀ ಭರತ್. ಹೆಚ್ ಜೆ., ತಹಶೀಲ್ದಾರ್ ಗ್ರೇಡ್-2, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು.

11. ಶ್ರೀಮತಿ ರೇಷ್ಮಾ. ಕೆ.ಎಸ್., ತಹಶೀಲ್ದಾರ್ ಗ್ರೇಡ್-2, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು.
12. ಶ್ರೀ ಸಂಜಯ್. ಎಂ., ತಹಶೀಲ್ದಾರ್ ಗ್ರೇಡ್-2, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು.
13. ತಹಶೀಲ್ದಾರ್, ಶಿರಾ ತಾಲ್ಲೂಕು, ಶಿರಾ.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**
1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ & ಭೂ ಕಂದಾಯ), ಬಹುಮಹಡಿ ಕಟ್ಟಡ, ಬೆಂಗಳೂರು.

20/11

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿಗೆ ಸಂಬಂಧಿಸಿದಂತೆ 1977-78ನೇ ಸಾಲಿನಲ್ಲಿ ದರಖಾಸ್ತು ಮೂಲಕ ಮಂಜೂರಾತಿ ಆಗಿರುವ ಸರ್ಕಾರಿ ಜಮೀನಿನ ಕಡತಗಳ ಪರಿಶೀಲನೆಗೆ ತನಿಖಾ ತಂಡವನ್ನು ರಚಿಸುವ ಬಗ್ಗೆ.

**ಓದಲಾಗಿದೆ:** ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ ಇವರ ಕಡತ ಸಂಖ್ಯೆ:TMKDC/LND/15/669/2024-LAND-TUMKUR DC

---*---

**ಪ್ರಸ್ತಾವನೆ:-**

ಮೇಲೆ ಓದಲಾದ ಕಡತದಲ್ಲಿ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ ರವರು ಪ್ರಸ್ತಾವನೆ ಸಲ್ಲಿಸುತ್ತಾ, ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನಲ್ಲಿ ದರಖಾಸ್ತು ನಿಯಮಗಳಡಿ ಅನೇಕ ಪ್ರಕರಣಗಳಲ್ಲಿ ಸಾಗುವಳಿ ಚೀಟಿ ನೀಡಿದ್ದು, 1977-78 ನೇ ಸಾಲಿನಲ್ಲಿ ಅಂದಿನ ತಹಶೀಲ್ದಾರ್ ರವರಾದ ಶ್ರೀ ಚಿಕ್ಕ ಚನ್ನಯ್ಯ (18/09/1976 ರಿಂದ 28/02/1978) ಮತ್ತು ಶ್ರೀ ರಾಮದಾಸ್ (23/09/1978 ರಿಂದ 27/12/1978) ಇವರ ಕಾಲದಲ್ಲಿ ಕಡತ ತಯಾರಿಸುವಾಗ ಮತ್ತು ಮುಂದುವರೆಸುವಾಗ ಅನೇಕ ಅಕ್ರಮಗಳು ಆಗಿರುವುದು ಬೆಳಕಿಗೆ ಬಂದಿದ್ದು, ಅವುಗಳಿಗೆ ಸಂಬಂಧಿಸಿದ ಕಡತಗಳ ಪರಿಶೀಲನೆಗೆ ಒಟ್ಟು 352 ಕಡತಗಳನ್ನು ಅಂದರೆ , ಕಸಬಾ ಹೋಬಳಿ-103, ಕಳ್ಳಂಬೆಳ್ಳ ಹೋಬಳಿ-49, ಹುಲಿಕುಂಟೆ-18, ಬುಕ್ಕಾಪಟ್ಟಣ ಹೋಬಳಿ-85 ಮತ್ತು ಗೌಡಗೆರೆ ಹೋಬಳಿ-97 ಕಡತಗಳನ್ನು ತಹಶೀಲ್ದಾರ್, ಶಿರಾ ತಾಲ್ಲೂಕು ರವರು ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಿರುತ್ತಾರೆ.

ಹಿಂದಿನ ತಹಶೀಲ್ದಾರ್ ರವರಾದ ಶ್ರೀ ಚಿಕ್ಕಚನ್ನಯ್ಯ ಮತ್ತು ಶ್ರೀ ರಾಮದಾಸ್ ಇವರ ಅವಧಿಯಲ್ಲಿ ಕೆಲವು ಅಕ್ರಮಗಳು ನಡೆದಿರುವುದು ಕಂಡುಬಂದಿರುವುದರಿಂದ ಅಲ್ಲದೇ ಯಾವುದೇ ಆದೇಶವಿಲ್ಲದೇ ಅನಧಿಕೃತ ಸಾಗುವಳಿ ಚೀಟಿ ನೀಡಿರುವ ಕೆಲವು ಜಮೀನುಗಳ ಖಾತೆ ಬದಲಾವಣೆ ಆಗಿರುವುದು ಕಂಡುಬಂದಿರುವುದರಿಂದ ಈ ಮಂಜೂರಾತಿಯ ನೈಜತೆಯ ಬಗ್ಗೆ ಪರಿಶೀಲನೆ ನಡೆಸುವ ಅಗತ್ಯತೆ ಕಂಡುಬಂದಿರುತ್ತದೆ. ಈ ವಿಚಾರವಾಗಿ ದಿ: 02/07/2024ರ ಮಾನ್ಯ ಶಾಸಕರು ಶಿರಾ ವಿಧಾನಸಭಾ ಕ್ಷೇತ್ರ ಹಾಗೂ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ, ನವದೆಹಲಿ ರವರು ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಎಲ್ಲಾ ಕಡತಗಳ ನೈಜತೆಯನ್ನು ಪರಿಶೀಲಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ತನಿಖಾ ತಂಡ ರಚಿಸಲು ಸರ್ಕಾರಕ್ಕೆ ಪತ್ರ ಬರೆಯಲು ನಿರ್ದೇಶನ ನೀಡಲಾಗಿರುತ್ತದೆ.

ಆದ್ದರಿಂದ ದಿ:02/07/2024ರ ಸಭೆಯಲ್ಲಿನ ನಿರ್ದೇಶನದಂತೆ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನನಲ್ಲಿ ದಾರಖಾಸ್ತು ಮಂಜೂರಾತಿ ಕುರಿತಂತೆ 1977-78 ನೇ ಸಾಲಿನಲ್ಲಿ ಕಡತಗಳನ್ನು ತಯಾರಿಸುವಾಗ ಮತ್ತು ಮುಂದುವರೆಸುವಾಗ ಆಗಿರುವ ಅಕ್ರಮಗಳ ಬಗ್ಗೆ ಪರಿಶೀಲನೆ ಮಾಡುವ ಸಂಬಂಧ ತನಿಖಾ ತಂಡ ರಚಿಸುವಂತೆ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ ಇವರು ಕೋರಿರುತ್ತಾರೆ. ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 88 ಎಲ್‌ಜಿಟಿ 2024,**
**ಬೆಂಗಳೂರು, ದಿನಾಂಕ:06.11.2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನಿನಲ್ಲಿ ದಾರಖಾಸ್ತು ಮಂಜೂರಾತಿ ಕುರಿತಂತೆ 1977-78 ನೇ ಸಾಲಿನಲ್ಲಿ

ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನ ಒಟ್ಟು 352 ಕಡತಗಳನ್ನು ಅಂದರೆ, ಕಸಬಾ ಹೋಬಳಿ-103, ಕಳ್ಳಂಬೆಳ್ಳ ಹೋಬಳಿ-49, ಹುಲಿಕುಂಟೆ-18, ಬುಕ್ಕಾಪಟ್ಟಣ ಹೋಬಳಿ-85 ಮತ್ತು ಗೌಡಗೆರೆ ಹೋಬಳಿ-97 ಕಡತಗಳನ್ನು ತಯಾರಿಸುವಾಗ ಮತ್ತು ಮುಂದುವರೆಸುವಾಗ ಆಗಿರುವ ಅಕ್ರಮಗಳ ಬಗ್ಗೆ ಹಾಗೂ ಸಂಬಂಧಿಸಿದ ಇತರ ಕಡತ ಮತ್ತು ದಾಖಲೆಗಳನ್ನು ಪರಿಶೀಲಿಸಿ ನಿಷ್ಪಕ್ಷಪಾತ ತನಿಖೆಯನ್ನು ನಡೆಸಿ ಸಮಗ್ರ ವರದಿಯನ್ನು ಸಲ್ಲಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 195 ಹಾಗೂ ಕರ್ನಾಟಕಭೂ ಕಬಳಿಕೆ ನಿಷೇಧ ಕಾಯ್ದೆ 2011 ರ ಕಲಂ 8 ರಡಿ ಈ ಕೆಳಕಂಡ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಅಧ್ಯಕ್ಷರು ಹಾಗೂ ಸದಸ್ಯರ ಹೆಸರು | ಹುದ್ದೆ |
|---|---|---|
| 1. | ಶ್ರೀ ಆರ್.ಜಿ. ಚಂದ್ರಶೇಖರ್,<br>ವಿಶೇಷ ಜಿಲ್ಲಾಧಿಕಾರಿ (ಪ್ರ), ಕೇಂದ್ರೀಯ ಜಾರಿದಳ, ಭೂಮಿ ಉಸ್ತುವಾರಿ ಕೋಶ, ಕಂದಾಯ ಆಯುಕ್ತಾಲಯ, ಬೆಂಗಳೂರು. | ಅಧ್ಯಕ್ಷರು |
| 2. | ಶ್ರೀಮತಿ ಸೀಮಾ ನಾಯಕ್. ಬಿ., ಕೆ.ಎ.ಎಸ್.,<br>ಅಪರ ಪ್ರಾದೇಶಿಕ ಆಯುಕ್ತರು (ಆಡಳಿತ ಮತ್ತು ಅಭಿವೃದ್ಧಿ),<br>ಬೆಂಗಳೂರು ವಿಭಾಗ, ಬೆಂಗಳೂರು. | ಸದಸ್ಯರು |
| 3. | ಶ್ರೀ ಇಸ್ಲಾವುದ್ದೀನ್ ಜೆ. ಗದ್ಯಾಳ, ಕೆ.ಎ.ಎಸ್.,<br>ಅಪರ ಪ್ರಾದೇಶಿಕ ಆಯುಕ್ತರು (ಪ್ರ) (ಭೂ ನಿರ್ವಹಣೆ, ಯೋಜನೆ ಮತ್ತು ಇತರೆ), ಬೆಂಗಳೂರು ವಿಭಾಗ, ಬೆಂಗಳೂರು. | ಸದಸ್ಯರು |
| 4. | ಶ್ರೀ ಡಾ.ಎನ್.ತಿಪ್ಪೇಸ್ವಾಮಿ, ಕೆ.ಎ.ಎಸ್.,<br>ಅಪರ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ | ಸದಸ್ಯರು |
| 5. | ಶ್ರೀ ಶಿವಪ್ಪ ಗೊಟೂರು, ಕೆ.ಎ.ಎಸ್.,<br>ಉಪ ವಿಭಾಗಾಧಿಕಾರಿ, ಮಧುಗಿರಿ ಉಪವಿಭಾಗ, ಮಧುಗಿರಿ. | ಸದಸ್ಯ ಕಾರ್ಯದರ್ಶಿ |
| 6. | ಶ್ರೀ ಗಣಪತಿ ಶಾಸ್ತ್ರಿ, ತಹಶೀಲ್ದಾರ್,<br>ಕೇಂದ್ರೀಯ ಜಾರಿದಳ, ಕಂದಾಯ ಆಯುಕ್ತಾಲಯ,<br>ಬಹುಮಹಡಿಗಳ ಕಟ್ಟಡ, ಬೆಂಗಳೂರು | ಸದಸ್ಯರು |
| 7. | ಶ್ರೀ ಭರತ್. ಹೆಚ್ ಜೆ.,<br>ತಹಶೀಲ್ದಾರ್ ಗ್ರೇಡ್-2, ಪ್ರಾದೇಶಿಕ ಆಯುಕ್ತರ ಕಛೇರಿ,<br>ಬೆಂಗಳೂರು ವಿಭಾಗ, ಬೆಂಗಳೂರು. | ಸದಸ್ಯರು |
| 8. | ಶ್ರೀಮತಿ ರೇಷ್ಮಾ. ಕೆ.ಎಸ್.,<br>ತಹಶೀಲ್ದಾರ್ ಗ್ರೇಡ್-2, ಪ್ರಾದೇಶಿಕ ಆಯುಕ್ತರ ಕಛೇರಿ,<br>ಬೆಂಗಳೂರು ವಿಭಾಗ, ಬೆಂಗಳೂರು. | ಸದಸ್ಯರು |
| 9. | ಶ್ರೀ ಸಂಜಯ್. ಎಂ.,<br>ತಹಶೀಲ್ದಾರ್ ಗ್ರೇಡ್-2, ಪ್ರಾದೇಶಿಕ ಆಯುಕ್ತರ ಕಛೇರಿ,<br>ಬೆಂಗಳೂರು ವಿಭಾಗ, ಬೆಂಗಳೂರು. | ಸದಸ್ಯರು |

ಮೇಲ್ಕಂಡ ತನಿಖಾ ತಂಡವು ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನನಲ್ಲಿ ಸಾಗುವಳಿಯನ್ನು ಸಕ್ರಮೀಕರಣಗೊಳಿಸಲು 1977-78 ನೇ ಸಾಲಿನಲ್ಲಿ ಕಡತಗಳನ್ನು ತಯಾರಿಸುವಾಗ ಮತ್ತು ಮುಂದುವರೆಸುವಾಗ ಆಗಿರುವ ಅಕ್ರಮಗಳ ಬಗ್ಗೆ ಪರಿಶೀಲನೆ ಮಾಡಿ ಅಕ್ರಮವೆಸಗಿರುವುದು ಕಂಡುಬಂದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತುತ ಮೇಲ್ಮನವಿ) ನಿಯಮಗಳು, 1957/ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958 ರನ್ವಯ ದೋಷಾರೋಪಣಾ ಪಟ್ಟಿಯ ಕರಡನ್ನು (ಅನುಬಂಧ 1 ರಿಂದ 4) ತಯಾರಿಸುವುದು, ಮುಂದುವರೆದು, ತನಿಖಾ ತಂಡವು 15 ದಿನಗಳಲ್ಲಿ ತನಿಖಾ ಕಾರ್ಯವನ್ನು ಪೂರ್ಣಗೊಳಿಸಿ, ಸ್ಪಷ್ಟ ಶಿಫಾರಸ್ಸಿನೊಂದಿಗೆ ಆಯುಕ್ತರು, ಕಂದಾಯ ಆಯುಕ್ತಾಲಯ ಇವರಿಗೆ ಸಮಗ್ರ ವರದಿಯನ್ನು ಸಲ್ಲಿಸತಕ್ಕದ್ದು.

ಮುಂದುವರೆದು, ಆಯುಕ್ತರು, ಕಂದಾಯ ಆಯುಕ್ತಾಲಯ ರವರು ತನಿಖಾ ವರದಿಯನ್ನು ಪರಿಶೀಲಿಸಿ, ಅವರ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

6/11/24
**(ಜಗದೀಶ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-3)

**ಇವರಿಗೆ:**

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
2. ಕಂದಾಯ ಆಯುಕ್ತರು, ಕಂದಾಯ ಆಯುಕ್ತಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
4. ಶ್ರೀ ಆರ್.ಜಿ. ಚಂದ್ರಶೇಖರ್, ವಿಶೇಷ ಜಿಲ್ಲಾಧಿಕಾರಿ (ಪ್ರ), ಕೇಂದ್ರೀಯ ಜಾರಿದಳ, ಭೂಮಿ ಉಸ್ತುವಾರಿ ಕೋಶ, ಕಂದಾಯ ಆಯುಕ್ತಾಲಯ, ಬೆಂಗಳೂರು.
5. ಶ್ರೀಮತಿ ಸೀಮಾ ನಾಯಕ್. ಬಿ., ಕೆ.ಎ.ಎಸ್.,ಅಪರ ಪ್ರಾದೇಶಿಕ ಆಯುಕ್ತರು (ಆಡಳಿತ ಮತ್ತು ಅಭಿವೃದ್ಧಿ), ಬೆಂಗಳೂರು ವಿಭಾಗ, ಬೆಂಗಳೂರು.
6. ಶ್ರೀ ಇಸ್ಲಾವುದ್ದೀನ್ ಜೆ. ಗದ್ಯಾಳ, ಕೆ.ಎ.ಎಸ್.,ಅಪರ ಪ್ರಾದೇಶಿಕ ಆಯುಕ್ತರು (ಪ್ರ) (ಭೂ ನಿರ್ವಹಣೆ, ಯೋಜನೆ ಮತ್ತು ಇತರೆ), ಬೆಂಗಳೂರು ವಿಭಾಗ, ಬೆಂಗಳೂರು.
7. ಶ್ರೀ ಡಾ.ಎನ್.ತಿಪ್ಪೇಸ್ವಾಮಿ, ಕೆ.ಎ.ಎಸ್., ಅಪರ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
8. ಶ್ರೀ ಶಿವಪ್ಪ ಗೊಟೂರು, ಕೆ.ಎ.ಎಸ್., ಉಪ ವಿಭಾಗಾಧಿಕಾರಿ, ಮಧುಗಿರಿ ಉಪ ವಿಭಾಗ, ಮಧುಗಿರಿ.
9. ಶ್ರೀ ಗಣಪತಿ ಶಾಸ್ತ್ರಿ, ತಹಶೀಲ್ದಾರ್,ಕೇಂದ್ರೀಯ ಜಾರಿದಳ, ಕಂದಾಯ ಆಯುಕ್ತಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಶ್ರೀ ಭರತ್. ಹೆಚ್ ಜೆ., ತಹಶೀಲ್ದಾರ್ ಗ್ರೇಡ್-2, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು.
11. ಶ್ರೀಮತಿ ರೇಷ್ಮಾ. ಕೆ.ಎಸ್., ತಹಶೀಲ್ದಾರ್ ಗ್ರೇಡ್-2, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು.
12. ಶ್ರೀ ಸಂಜಯ್. ಎಂ., ತಹಶೀಲ್ದಾರ್ ಗ್ರೇಡ್-2, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು.
13. ತಹಶೀಲ್ದಾರ್, ಶಿರಾ ತಾಲ್ಲೂಕು, ಶಿರಾ.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ & ಭೂ ಕಂದಾಯ), ಬಹುಮಹಡಿ ಕಟ್ಟಡ, ಬೆಂಗಳೂರು.